Removing Scareity of Drinking Water in Indi and Sindagi Taluks

239. SRI J. L. KABADE (Balloli).—Will the Minister for Rural Development and Panchayat Raj be pleased to state.—

(*a*) the number of wells dug up through Rigs from 1972 to December, 1976 in Indi and Sindagi Taluks;

(*b*) the number of villages in which the wells are dugup and their number in each village;

(*c*) the villages in which the wells are filled with pumps;

(*d*) the number of pumps which have become unserviceable from among them;

(*e*) the villages on which the scarcity of drinking water generally prevails in the above taluks;

(*f*) the arrangements made for supply of drinking water in such villages;

(*g*) the action taken by the Government on the petitions received by the Deputy Commissioner of the District from the Villagers about the scarcity of drinking water;

(*h*) whether it has come to the notice of the Government that the people are put to hardship without drinking water due to poor quality pumps and their getting un-serviceable the same day they were fitted?

SRI K. PRABHAKAR (Minister for Rural Development and Panchayat Raj).—

(*a*) Indi - Sindagi
104 146

(*b*) and (*c*) The details are furnished in the statement 'A' placed on the table of the House. * *

(*d*) Indi-7, Sindagi-9

(*e*) Indi-132, Sindagi-121 (The names of villages are furnished in the statement 'B' placed on the table of the House).**

(*f*) The taluks of Indi and Sindagi taluks has been supplied with a rigmachine respectively and the work of digging bore wells is under swift progress.

(*g*) The directions have been issued to the concerned officers to dig drinking water wells wherever requests are made. The work of digging wells is under progress.

(*h*) No.

---

* * Statement Copies placed in the Karnatak Legislature Library *vide* No. 19 dated 15th June 1977

ಶ್ರೀ ಜೆ. ಎಲ್. ಕಬಾಡೆ.— ಕುಡಿಯುವ ನೀರಿಗಾಗಿ ಕೂಡಿಸಿದ ಪಂಪುಸೆಟ್ಟುಗಳು ಉತ್ತಮ ಗುಣಮಟ್ಟದಿಲ್ಲದ ಕಾರಣ ಕೂಡಿಸಿದ ದಿನವೇ ಕೆಟ್ಟು ಉಪಯೋಗವಾಗದಿರುವ ಕಾರಣ ಜನತೆಗೆ ಕುಡಿಯುವ ನೀರಿನ ವುರವಣೆ ಲೋಗ್ಯರೀತಿಯಿಂದ ಆಗದ್ದಕ್ಕೆ ತೊಂದರೆಗೀಡಾಗಿದ್ದು ಸರ್ಕಾರದ ಗಮನಕ್ಕೆ ಬಂವಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಈ ಯಂತ್ರಗಳನ್ನು ಯಾವ ಕಂಪನಿಯಿಂದ ಖರೀದಿ ಮಾಡಿದ್ದೀರಿ, ಇಷ್ಟು ಬೆಲೆಯುಳ್ಳದ್ದನ್ನು ಖರೀದಿ ಮಾಡಿದ್ದೀರಿ ಮತ್ತು ಯಾವತ್ತು ಖರೀದಿಮಾಡಿದ್ದೀರಿ?

†ಶ್ರೀ ಕೆ. ಪ್ರಭಾಕರ್.—ಮೊದಮೊದಲು ಜೋಡಿಸಿದ ಪಂಪುಸೆಟ್ಟುಗಳನ್ನು ಬೇಗ ಬೇಗ ಕೆಟ್ಟು ಹೋಗುತ್ತವೆ ಎಂದು ತಿಳಿದು ಸ್ವಲ್ಪ ದಿನ ಬಾಳಿಕೆ ಬರುವ ಯಂತ್ರಗಳನ್ನು ಇಲಾಖೆಯವರು ಜೋಡಿಸುತ್ತಿದ್ದಾರೆ. ಈಗ ಹೆಚ್ಚಾಗಿ ಕೆಟ್ಟು ಹೋಗುವುದಿಲ್ಲ ಎಂದು ಗೊತ್ತಾಗಿದೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ, ಇದು ಹೊಸ ಪದ್ಧತಿಯದು Rough use by villagers. ಇದನ್ನು ಉಪಯೋಗಿಸುವುದಕ್ಕೆ ಅಷ್ಟಾಗಿ ಬಾರದೇ ಇರುವುದು, ಒಂದೊಂದು ಸಲ ಮಣ್ಣು, ಕಲ್ಲು ತುಂಬುವುದರಿಂದ ಕೆಟ್ಟು ಹೋಗುತ್ತದೆ ಎಲ್ಲೆಲ್ಲ ಕೆಟ್ಟುಹೋಗಿದೆ ಎಂದು ಸಂಬಂಧಪಟ್ಟವರ ಗಮನಕ್ಕೆ ಬುದ ಕೂಡಲೇ ರಿಪೇರಿ ಮಾಡುವ ವ್ಯವಸ್ಥೆ ಕೂಡ ಮಾಡಲಾಗಿದೆ. ನಾನು ನಿನ್ನೆ ಉತ್ತರ ಕೊಟ್ಟ ಹಾಗೆ ಇನ್ನೂ ಉತ್ತಮವಾದ ಪಂಪುಸೆಟ್ಟುಗಳಿವೆಯೇ ಎನ್ನುವುದನ್ನು ಕಂಡುಕೊಂಡು ಇನ್ನೂ ಹೆಚ್ಚಿನ ಉತ್ತಮ ರೀತಿಯಲ್ಲಿ ಜೋಡಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಜೆ. ಎಲ್, ಕಬಾಡೆ.—ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಿ ಇನ್ನೂ ಮಳೆ ಬಿದ್ದಿಲ್ಲ, ನೀರಿನ ಅಭಾವ ಇದೆ. ಆದುದರಿಂದ ಅಲ್ಲಿಗೆ ಇನ್ನೂ ಹೆಚ್ಚಿನ ರಿಗ್ ಮಿಷನ್ನುಗಳನ್ನು ಕಳಿಸಿ, ಬಾವಿಗಳನ್ನು ತೆಗೆಸಲಿಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ನಾನು ಮೊನ್ನೆ ತಾನೆ ಆ ಎರಡು ಪ್ರದೇಶಗಳಿಗೂ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ನೀರಿಗೆ ತೊಂದರೆಯಾಗಿರತಕ್ಕ ಗ್ರಾಮಗಳನ್ನು ಬಹುಬೇಗ ತೆಗೆದುಕೊಳ್ಳಬೇಕು ಎಂದು ಆದೇಶ ಕೊಟ್ಟಿದ್ದೇನೆ. ಅಲ್ಲಿನ ಶಾಸಕರು, ಮುಖ್ಯಸ್ಥರಾದಿಯಾಗಿ ನೀರಿಗೆ ತೊಂದರೆ ಇರತಕ್ಕ ಗ್ರಾಮಗಳನ್ನು ಪಟ್ಟಿಮಾಡಿಕೊಟ್ಟಿದ್ದಾರೆ ಅದನ್ನು ಸಂಬಂಧಪಟ್ಟವರಿಗೆ ಕೊಟ್ಟು, ಬೇಗ ಪೂರೈಸಬೇಕು ಎಂದು ಆದೇಶಕೊಟ್ಟಿರುವುದರಿಂದ ಕೆಲಸಕಾರ್ಯಗಳು ವ್ಯವಸ್ಥಿತವಾಗಿ ನಡೆಯುತ್ತಿವೆ.

ಶ್ರೀ ಜೆ ಎಲ್. ಕಬಾಡೆ.—೪–೫ ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ಒಂದೇ ಒಂದು ರಿಗ್‌ವೆಲ್ ತೆಗೆಯುವುದರಿಂದ ಸಾಕಷ್ಟು ನೀರನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಆದುದರಿಂದ ದೊಡ್ಡ ಪ್ರಮಾಣದಲ್ಲಿ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ಕನಿಷ್ಟ ೪–೫ ರಿಗ್ ಬಾವಿಗಳನ್ನು ತೆಗೆದರೆ ಅನುಕೂಲವಾಗುತ್ತದೆ. ಹೆಚ್ಚು ಜನಸಂಖ್ಯೆ ಇರುವ ಕಡೆ ೪–೫ ಬಾವಿಗಳನ್ನು ತೆಗೆಸುವುದಕ್ಕೆ ಆರ್ಡರ್‌ನ್ನು ಮಾಡುತ್ತೀರಾ?

ಶ್ರೀ ಕೆ ಪ್ರಭಾಕರ್.—ಹೆಚ್ಚು ಜನಸಂಖ್ಯೆ ಇದ್ದರೂ ಒಂದೇ ಬಾವಿಯಲ್ಲಿ ಹೆಚ್ಚು ಹೆಚ್ಚು ನೀರು ಸಿಗುವ ಸಂದರ್ಭಗಳು ಉಂಟು. ಒಂದು ವೇಳೆ ನೀರು ಕಡಿಮೆಯಾಗಿ ಒಂದೇ ಬಾವಿಯಿಂದ ನೀರು ಎಷ್ಟು ಬೇಕೋ ಅಷ್ಟು ಒದಗಿಸುವುದಕ್ಕೆ ಆಗದೇ ಹೋದರೆ ಒಂದೆರೆಡು ಮೂರು ಬೇಕು ಎಂದರೆ ತೆಗೆಯುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಬಂಧಪಟ್ಟವರ ಗಮನಕ್ಕೆ ತಂದು ಅವಶ್ಯಕವಾದರೆ ಅದಕ್ಕೆ ವ್ಯವಸ್ಥೆಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡೆ.—ಈಗ ತೆಗೆದಿರತಕ್ಕ ರಿಗ್ ವೆಲ್‌ಗಳಲ್ಲಿ ಮಳೆಯಾಗದೇ ಇರುವುದರಿಂದ ನೀರಿನ ಮಟ್ಟ ಕೆಳಗೆ ಹೋಗುತ್ತದೆ. ಪಂಪುಗಳಲ್ಲಿ ನೀರು ಬರುವುದಿಲ್ಲ. ಅದಕ್ಕೆ ಕೂಡಿಸಿರತಕ್ಕ ಪಂಪುಗಳಿಗೆ ಆಳದಿಂದ ನೀರನ್ನು ಜಗ್ಗತಕ್ಕ ಶಕ್ತಿ ಇರುವುದಿಲ್ಲ, ಅದಕ್ಕೆ ಏನು ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ವಾಸ್ತವಿಕವಾಗಿ ಅಂಥವನ್ನು ಫೈಲ್ಡ್ ವೆಲ್ ಎಂದು ತಿಳಿದುಕೊಳ್ಳಲಾಗಿದೆ. ಅಲ್ಲಿ ರಿಗ್‌ವೆಲ್ ಮಾಡಿದರೆ ನೀರು ಬರಬಹುದು. ಅದನ್ನು ಹಾಗೆಯೇ ದುರಸ್ತು ಮಾಡಿದರೆ ವಿಫಲ ಪ್ರಯತ್ನವಾಗುವುದರಿಂದ ಅಲ್ಲಿ ಹೊಸದಾಗಿ ಬಾವಿಯನ್ನು ತೆಗೆಯಬೇಕಾಗುತ್ತದೆ. ಎಲ್ಲಾ ಕಡೆಯೂ ನೀರನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಹೊಸ ಬಾವಿಯನ್ನು ತೆಗೆಯುವ ಪ್ರಯತ್ನಮಾಡುತ್ತೇವೆ.